# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮದ ನೋಂದಾಯಿತ ಕಚೇರಿ: ನಂ: 29,
ವಿಜಯನಗರ 2 ನೇ ಹಂತ,
ಕಾವೇರಿ ಗ್ರಾಮಿಣ ಬ್ಯಾಂಕ್ ರಸ್ತೆ, ಹಿನಕಲ್,
ಮೈಸೂರು-570017
ನಿಗಮ ವೆಬ್ ಸೈಟ್:www.cescmysore.org.
ಇಮೇಲ್: gmcescmysore@gmail.com
CIN No.U40109KA2004SGC035177

ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್ (ವಿ)
ರವರ ಕಚೇರಿ ಚಾವಿಸನಿನಿ, ಕಾ&ಪಾ ನಗರ ಉಪ ವಿಭಾಗ
ಮದ್ದೂರು-571428
ದೂರವಾಣಿ: 08232-232015.
ಮೊಬೈಲ್: 9448994845
ಫ್ಯಾಕ್ಸ್: 08232-233600
ಇ-ಮೇಲ್: aee_maddur@rediffmail.com

ಕ್ರಮಾಂಕ:ಸಕಾನಿಇಂ(ವಿ)/ಕಾ&ಪಾ,ನಉವಿ/ಮದ್ದೂರು-1/2017-18/ ೬೭೦೦ ದಿನಾಂಕ: 02 MAR 2018
ಲಗತ್ತು:

## ವಿದ್ಯುತ್ ಜನಸಂಪರ್ಕ ಸಭಾ ನಡಾವಳಿ

ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ವೃತ್ತ ಕಛೇರಿ, ಮಂಡ್ಯ ರವರ ಅಧ್ಯಕ್ಷತೆಯಲ್ಲಿ ಉಪವಿಭಾಗೀಯ ಕಛೇರಿ ಮದ್ದೂರಿನಲ್ಲಿ ದಿನಾಂಕ:23.02.2018 ರಂದು ಜರುಗಿದ ನಗರ ಉಪವಿಭಾಗದ ವಿದ್ಯುತ್ ಜನಸಂಪರ್ಕ ಸಭೆಯ ನಡಾವಳಿ.

ಸಭೆಯಲ್ಲಿ ಹಾಜರಿದ್ದಅಧಿಕಾರಿ/ನೌಕರರ ವಿವರ:

| ಕ್ರಮ ಸಂಖ್ಯೆ | ಅಧಿಕಾರಿ/ಸಿಬ್ಬಂದಿ | ಹುದ್ದೆ | ಕಾರ್ಯನಿರ್ವಹಿಸುತ್ತಿರುವ ಸ್ಥಳ |
|---|---|---|---|
| 1 | ಶ್ರೀ ರವಿಶಂಕರ್ | ಅ ಇಂ(ವಿ) | ವೃತ್ತ ಕಛೇರಿ, ಮಂಡ್ಯ |
| 2 | ಶ್ರೀ ರವಿಶಂಕರ್ | ಕಾ ನಿಇಂ(ವಿ) | ವೃತ್ತ ಕಛೇರಿ, ಮಂಡ್ಯ |
| 3 | ಶ್ರೀ ನಾಗರಾಜು | ಲೆಕ್ಕಾಧಿಕಾರಿ | ಮದ್ದೂರು ವಿಭಾಗ |
| 4 | ಶ್ರೀಮತಿ ಶ್ವೇತ ಎಂ.ಎಸ್ | ಸ ಕಾಇಂ(ವಿ) | ಮದ್ದೂರು ವಿಭಾಗ |
| 5 | ಶ್ರೀ ಜಿ.ಯು.ಮಂಜುನಾಥ್ | ಸ ಕಾಇಂ(ವಿ) | ಮದ್ದೂರು ನಗರ ಉಪವಿಭಾಗ |
| 6 | ಶ್ರೀಮತಿ ಸುವರ್ಣ ಎಸ್ | ಸ ಇಂ(ವಿ) ತಾಂತ್ರಿಕ | ಮದ್ದೂರು ಉಪವಿಭಾಗ-1 |
| 7 | ಶ್ರೀ ಮಹೇಶ್ ಕುಮಾರ್ | ಹಿರಿಯ ಸಹಾಯಕ | ಮದ್ದೂರು ಉಪವಿಭಾಗ-1 |
| 8 | ಶ್ರೀ ಹೆಚ್.ಸಿ.ರಾಮಚಂದ್ರ | ಪ್ರ ಕಿಇಂ(ವಿ) | ಮದ್ದೂರು1&2 ಶಾಖೆ |
| 9 | ಶ್ರೀ ಆರ್.ಪ್ರಕಾಶ್ | ಪ್ರ ಕಿಇಂ(ವಿ) | ಗೆಜ್ಜಲಗೆರೆ ಶಾಖೆ |
| 10 | ಶ್ರೀ ರಾಜೇಶ್ | ಕಿ ಇಂ(ವಿ) | ಘಟಕ -2 ಕೆ.ಎಂ.ದೊಡ್ಡಿಶಾಖೆ |
| 11 | ಶ್ರೀ ಶಿವರಾಮು | ಕಿ ಇಂ(ವಿ) | ಘಟಕ -1 ಕೆ.ಎಂ.ದೊಡ್ಡಿಶಾಖೆ |
| 12 | ಶ್ರೀ ತಾಂಡವ ಮೂರ್ತಿ | ಹಿರಿಯ ಸಹಾಯಕ | ಭಾರತೀನಗರ ಶಾಖೆ |

ಸಭೆಯಲ್ಲಿ ಹಾಜರಿದ್ದ ಎಲ್ಲಾ ಗ್ರಾಹಕರು/ನೌಕರರುಗಳನ್ನು ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯ ರವರು, ಸ್ವಾಗತಿಸಿ ಈ ಕೆಳಕಂಡ ಗ್ರಾಹಕರ ದೂರುಗಳಿಗೆ ಪ್ರತಿಕ್ರಯಿಸಿ ಉತ್ತರಿಸಲಾಯಿತು.

| ಕ್ರ ಸಂ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
|---|---|---|
| | **ಗ್ರಾಹಕರು –ಶ್ರೀ ರವೀಂದ್ರ, ಟೀಚರ್ಸ್ ಕಾಲೋನಿ ಮದ್ದೂರು** | |
| 1 | ತಮ್ಮ ತಾತ್ಕಾಲಿಕ ಸ್ಥಾವರಸಂಖ್ಯೆ MTP-1880ರ ಬಾಕಿ ಮೊತ್ತವನ್ನು ಕುರಿತು ದೂರು ನೀಡಿರುತ್ತಾರೆ | ಸದರಿ ಸ್ಥಾವರದ ಗ್ರಾಹಕರ ಮನವಿ ಮಾಡಿ ಕಾರಣಾಂತರಗಳಿಂದ ಉಪಯೋಗಿಸದೇ ಮನೆಯೊಳಗೆ ಮಾಪಕ ಸ್ಥಳಾಂತರಿಸಿ ಬಾಗಿಲು ಮುಚ್ಚಲಾಗಿತ್ತು. ಆದರೆ ಅಂತಿಮವಾಗಿ ಬಾಗಿಲು ತೆಗೆದಾಗ ಮಾಪಕವನ್ನು ಕಳಚಿದ ದಿನದವರೆಗೂ ನಿಗದಿತ ಶುಲ್ಕ ವಿಧಿಸಿರುವುದನ್ನು ತೆಗೆದು ಕೊಡಲು ಕೋರಲಾಗಿರುವ ಹಿನ್ನೆಲೆಯಲ್ಲಿ, ಶಾಖಾಧಿಕಾರಿಗಳಿಗೆ ಸಲಹೆ ನೀಡಿ ಸ್ಥಾವರಕ್ಕೆ ಬಳಕೆ ಸ್ಥಗಿತಗೊಂಡಿದ್ದ ದಿನಕ್ಕೆ ನಿಲುಗಡೆಗೊಂಡಿದೆ ಎಂದು ವರದಿ ನೀಡಿ ಮಾಪಕ ಕಳಚುವವರೆಗೂ ಬೇಡಿಕೆ ಮಾಡಿರುವ ಮೊತ್ತ ರೂ.3113/-ಮತ್ತು ಬಡ್ಡಿ ರೂ.342/- ಒಟ್ಟು ರೂ.3455/-ಗಳನ್ನು ಕೈಬಿಟ್ಟು ಉಳಿಕೆ ಮೊತ್ತವನ್ನು ಪಾವತಿಸಿಕೊಳ್ಳುವಂತೆ ಲೆಕ್ಕಾಧಿಕಾರಿಗಳಿಗೆ ಸೂಚಿಸಿದರು. |
| | **ಗ್ರಾಹಕರು– ಶ್ರೀ ಯಶವಂತ, ಮದ್ದೂರು** | |
| 2 | 2013 ರಲ್ಲಿ 2 ಎಕರೆ ಕಬ್ಬು ಸುಟ್ಟುಹೋಗಿದ್ದು ಇದುವರೆವಿಗು ಯಾವುದೇ ಸೌಲಭ್ಯ ದೊರಕಿರುವುದಿಲ್ಲವೆಂದು ದೂರಿದರು | ಸದರಿ ವಿಷಯಕ್ಕೆ ಪ್ರತಿಕ್ರಿಯಿಸಿ ಸೂಕ್ತ ಕ್ರಮಕೈಗೊಳ್ಳುವುದಾಗಿ ತಿಳಿಸಿದರು |
| | **ಗ್ರಾಹಕರು– ಶ್ರೀಮತಿ ಸಾವಿತ್ರಮ್ಮ, ಕೆ.ಐ.ಎ.ಡಿ.ಬಿ ಕ್ವಾಟ್ರಸ್,ಚಾಮನಹಳ್ಳಿ ಹೊಸ ಬಡಾವಣೆ** | |
| 3 | ವಿದ್ಯುತ್ ಬಿಲ್ಲು ಅಧಿಕವಾಗಿ ಬಂದಿರುವ ಬಗ್ಗೆ | ಸದರಿಯವರ ಬಿಲ್ಲನ್ನು ಪರಿಶೀಲಿಸಲಾಗಿ ಪ್ರತಿ ಮಾಹೆಯಾನ 120 ಯೂನಿಟ್ಟುಗಳಿಗೂ ಅಧಿಕ ಬಳಕೆಯಾಗುತ್ತಿದ್ದು ಹಲವು ತಿಂಗಳುಗಳಿಂದ ಬಿಲ್ಲು ಪಾವತಿಸದಿರುವುದರಿಂದ ಬಾಕಿ ಇದ್ದು, ಈಗಾಗಲೇ ಎಲ್.ಟಿ.ರೇಟಿಂಗ್ ರವರಿಂದ ಪರಿಶೀಲನೆಗೊಳಪಡಿಸಲಾಗಿ ಮಾಪಕ ಸರಿ ಇರುವ ಬಗ್ಗೆ ವರದಿ ನೀಡಿದ್ದು, ಪ್ರಸಕ್ತ ಎಲೆಕ್ಟ್ರೋ ಸ್ಟಾಟಿಕ್ ಮಾಪಕವನ್ನು ಅಳವಡಿಸಿದ ಮೇಲೂ ಬಳಕೆ ಪ್ರಮಾಣ ಸಮನಾಗಿರುವುದನ್ನು ಗ್ರಾಹಕರಿಗೆ ಮನವರಿಕೆ ಮಾಡಿ ನಾಲ್ಕು ಕಂತುಗಳಲ್ಲಿ ಬಾಕಿಯನ್ನು ಪಾವತಿಸುವಂತೆ ಸೂಚಿಸಲಾಯಿತು. |
| | **ಗ್ರಾಹಕರು– ಶ್ರೀ ಪ್ರಭು, ವೈದ್ಯನಾಥಪುರ** | |
| 4 | ತಮ್ಮ ಮನೆಯ ಮೇಲೆ ಸರ್ವಿಸ್ ಮೈನ್‌ಗಳು ಹಾದುಹೋಗಿದ್ದು ತೊಂದರೆಯುಂಟಾಗುತ್ತಿದೆ ಆದ್ದರಿಂದ ಹೊಸ ಕಂಬಗಳನ್ನು ಅಳವಡಿಸಲು ಕೋರಿದರು | ಸದರಿ ವಿಷಯಕ್ಕೆ ಪ್ರತಿಕ್ರಿಯಿಸಿ ಸ್ಥಳ ಪರಿಶೀಲಿಸಿ ಕ್ರಮಕೈಗೊಳ್ಳುವುದಾಗಿ ತಿಳಿಸಿದರು |
| | **ಗ್ರಾಹಕರು– ಶ್ರೀ ಹೆಚ್ ಕೆ ಶಿವಣ್ಣ, ಹುಲಿಗೆರೆಪುರ** | |
| 5 | RUIP ಯೋಜನೆಯಡಿ ಇದುವರೆವಿಗು ಕಂಬ ಹಾಕಿಲ್ಲ ಎಂದು ದೂರಿದರು(W.O.No-V26232/04.08.2015) | ಸದರಿ ವಿಷಯದ ಬಗ್ಗೆ ಶಾಖಾಧಿಕಾರಿಗಳ ಬಳಿ ಚರ್ಚಿಸಲಾಗಿ ಸದರಿ ಸ್ಥಳದಲ್ಲಿ ಕಂಬ ಹಾಕಲು ಸ್ಥಳೀಯರಿಂದ ವಿರೋಧ ವ್ಯಕ್ತವಾಗುತ್ತಿರುವುದಾಗಿ ತಿಳಿಸಿದರು. ಸದರಿ ವಿಷಯದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |
| | **ಗ್ರಾಹಕರು– ಶ್ರೀ ಮರಿಲಿಂಗೇಗೌಡ, ನಗರಕೆರೆ** | |
| 6 | ಕ.ವಿ.ಪ್ರ.ನಿ.ನಿ. 33/11 ಕೆವಿ. ವಿದ್ಯುತ್ ವಿತರಣಾ ಕೇಂದ್ರದಲ್ಲಿ ದೂರವಾಣಿ ಕರೆಗಳಿಗೆ ಸ್ಪಂದಿಸುವುದಿಲ್ಲ ಎಂದು ದೂರಿದರು | ಸದರಿ ವಿಷಯಕ್ಕೆ ಪ್ರತಿಕ್ರಿಯಿಸಿ, ಕೆಪಿಟಿಸಿಎಲ್ ರವರು ಈ ಬಗ್ಗೆ ಸೂಕ್ತ ಮಾಹಿತಿ ನೀಡಲು ಹಾಗೂ ದೂರವಾಣಿ ಸ್ವೀಕರಿಸಿ ನಿಯಮಿತ ವೇಳೆಯಲ್ಲಿ ವಿದ್ಯುತ್ ನೀಡಲು ತಿಳಿಸಿದರು. |
| | **ಗ್ರಾಹಕರು – ಶ್ರೀ ರಮೇಶ,ಸೋಂಪುರ** | |
| 7 | ಐ.ಪಿ ಫೀಡರ್ ನಿಂದ ತಮ್ಮ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಿದ್ದು ಸದರಿ ಸ್ಥಾವರಕ್ಕೆ ಎನ್.ಜೆ.ವೈ ನಿಂದ ವಿದ್ಯುತ್ ಸಂಪರ್ಕ ಕಲ್ಪಿಸಲು ಕೋರಿದರು | ಸದರಿ ವಿಷಯಕ್ಕೆ ಪ್ರತಿಕ್ರಿಯಿಸಿ ಸ್ಥಳ ಪರಿಶೀಲಿಸಿ ಕ್ರಮಕೈಗೊಳ್ಳುವುದಾಗಿ ತಿಳಿಸಿದರು |

ಈ ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿ, ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಮುಂದಿನ ಜನ ಸಂಪರ್ಕ ಸಭೆಯ ವೇಳೆಗೆ ನಿಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುವುದಾಗಿ ತಿಳಿಸಿ ಸಭೆಯನ್ನು ಮಧ್ಯಾಹ್ನ 1.30 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್, ನಗರ ಉಪ ವಿಭಾಗ, ಮದ್ದೂರು

ಪ್ರತಿಯನ್ನು,
1) ಪ್ರಧಾನ ವ್ಯವಸ್ಥಾಪಕರು, ಚಾವಿಸನಿನಿ, ನಿಗಮ ಕಾರ್ಯಾಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ, ಮೈಸೂರು ವಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಮಂಡ್ಯರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮಂಡ್ಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
6) ಲೆಕ್ಕಾಧಿಕಾರಿ(ಆಂಪ), ಸೆಸ್ಕ್, ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
7) ಮು.ಕ

| ಕ್ರ ಸಂ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
|---|---|---|
| | ಗ್ರಾಹಕರು – ಶ್ರೀಮತಿ ಸಾವಿತ್ರಮ್ಮ, ಸಾದೊಳಲು | |
| 8 | RUIP ಯೋಜನೆಯಡಿ ಪರಿವರ್ತಕ ಜೋಡಣೆ ಇದುವರೆವಿಗು ಕೆಲಸ ನಿರ್ವಹಿಸಿಲ್ಲ ಎಂದು ದೂರಿದರು(W.O.No-Y26288/18.12.2017) | ಏಜೆನ್ಸಿ ಕಡೆಯಿಂದ ವಿಳಂಬಾಗಿದ್ದು ತುರ್ತಾಗಿ ನಿರ್ವಹಿಸಲು ಆದೇಶ ನೀಡುವುದಾಗಿ ತಿಳಿಸಿದರು |
| | ಗ್ರಾಹಕರು – ಶ್ರೀ ದೇವರಾಜು, ಯಲಾದಹಳ್ಳಿ | |
| 10 | ಯಲಾದಹಳ್ಳಿ ಸಂಪೂರ್ಣ ಗ್ರಾಮವನ್ನು ರೀಕಂಡಕ್ಟರಿಂಗ್ ಮಾಡಲು ಕೋರಿದರು | ಸದರಿ ಪ್ರಸ್ತಾವನೆಗೆ ಪ್ರತಿಕ್ರಿಯಿಸಿ, ಸ್ಥಳ ಪರಿಶೀಲನೆ ಮಾಡಿ ಅಂದಾಜು ಪಟ್ಟಿ ತಯಾರಿಸಿ ಮಂಜೂರಾತಿಗೆ ಸಲ್ಲಿಸಲು ಕಿರಿಯ ಇಂಜಿನಿಯರ್(ವಿ)ರವರಿಗೆ ತಿಳಿಸಲಾಯಿತು |
| | ಗ್ರಾಹಕರು – ಶ್ರೀ ತಮ್ಮಣ್ಣಗೌಡ, ಮರಕಾರದೊಡ್ಡಿ | |
| 11 | ಮರಕಾರದೊಡ್ಡಿ ಗ್ರಾಮಕ್ಕೆ ರೀಕಂಡಕ್ಟರಿಂಗ್ ಮಾಡಲು ಕಾರ್ಯಾದೇಶ ನೀಡಿದ್ದರು ಇದುವರೆವಿಗು ಕೆಲಸ ನಿರ್ವಹಿಸಿಲ್ಲ ಎಂದು ದೂರಿದರು | ಸದರಿ ಕೆಲಸವನ್ನು ಮೆ॥ ಪ್ರೇಮ್ ಎಲೆಕ್ಟ್ರಿಕಲ್ಸ್ ರವರಿಗೆ ನೀಡಿದ್ದು ಇದುವರೆವಿಗು ಕೆಲಸ ಪ್ರಾರಂಬಿಸಿಲ್ಲದಿರುವುದರಿಂದ ಸದರಿಯವರಿಗೆ ಟರ್ಮಿನೇಷನ್ ಅಗ್ರಿಮೆಂಟ್ ನೀಡಿ ಬೇರೆ ಏಜೆನ್ಸಿಯವರಿಗೆ ಕಾರ್ಯಾದೇಶ ನೀಡುವುದಾಗಿ ತಿಳಿಸಿರುತ್ತಾರೆ |
| | ಗ್ರಾಹಕರು – ಶ್ರೀ ರಾಮಲಿಂಗಯ್ಯ, ಮಾಲಗಾರನಹಳ್ಳಿ | |
| 12 | ಮಾಲಗಾರನಹಳ್ಳಿಯಲ್ಲಿ 20ದಿನಗಳಿಂದ ವಿದ್ಯುತ್ ಸಂಪರ್ಕವಿಲ್ಲವೆಂದು ದೂರಿದರು | ಸದರಿ ಸ್ಥಳದಲ್ಲಿ ಅಧಿಕ ಒತ್ತಡದಿಂದ ವಿದ್ಯುತ್ ವ್ಯತ್ಯಯವಾಗುತ್ತಿರುವುದಾಗಿ ತಿಳಿಸಿದರು ಹಾಗು RUIP ಯೋಜನೆಯಡಿ ಪರಿವರ್ತಕ ಜೋಡಣೆಮಾಡಲಾಗಿದೆ ಎಂದು ತಿಳಿಸಿದರು. |
| | ಗ್ರಾಹಕರು – ಶ್ರೀ ಚಂದ್ರಶೇಖರ್,ಗೆಜ್ಜಲಗೆರೆ | |
| | 2016 ರ ಹಲವು RUIP ಅಂದಾಜು ಪಟ್ಟಿಗಳು ಮಂಜೂರಾತಿಯಾಗಿದ್ದು ಇನ್ನು ಕೆಲವು ಮಂಜೂರಾತಿಯಾಗಿಲ್ಲವೆಂದು ದೂರಿದರು | ಸದರಿ ವಿಷಯಕ್ಕೆ ಪ್ರತಿಕ್ರಿಯಿಸಿ ಹಲವು ಅಂದಾಜು ಪಟ್ಟಿಗಳಲ್ಲಿ ನ್ಯೂನತೆಗಳಿದ್ದು ಸರಿಪಡಿಸಿಕೊಂಡ ನಂತರ ಮಂಜೂರಾತಿ ನೀಡುವುದಾಗಿ ತಿಳಿಸಿದರು. |
| | ಗ್ರಾಹಕರು – | |
| | ಹಳೆ ಒಕ್ಕಲಿಗರ ಬೀದಿ, ಮದ್ದೂರಿನಲ್ಲಿ ಕಡಿಮೆ ಒತ್ತಡ (Low voltage)ಇರುವುದಾಗಿ ತಿಳಿಸಿದರು | ಐ.ಪಿ.ಡಿ.ಎಸ್.ನಲ್ಲಿ ಹೆಚ್ಚುವರಿ 100 ಕೆ.ವಿ.ಎ. ಪರಿವರ್ತಕ ಆಗಿರುತ್ತದೆ.ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ ಎಂದು ತಿಳಿಸಿದರು. |